ಅ) ಸ್ಪೆಷಲ್ ಪಡೆದು ಎಷ್ಟು ಜನ ಯುವ ವಕೀಲರು ತಮ್ಮ ತರಬೇತಿಯನ್ನು ಮುಗಿಸಿರುತ್ತಾರೆ: ತರಬೇತಿ ನಂತರ ಇವರ ಕಾನೂನು ಜ್ಞಾನದ ಮಟ್ಟವನ್ನು ಅಳಿಯಲು ಯಾವ ಮಾನದಂಡ ಉಪಯೋಗಿಸಲಾಗುತ್ತದೆ?

ಇ) ಸರ್ಕಾರ ಯುವ ವಕೀಲರಿಗೆ ಸ್ಪೆಷಲ್ ನೀಡುವ ಕ್ರಮವನ್ನು ಮುಂದುವರಿಸುತ್ತದೆಯೇ: ಹಾಗಿದ್ದಲ್ಲಿ ಯಾವಾಗಿನಿಂದ ಜಾರಿಗೊಳಿಸಲಾಗುವುದು?

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು):

ಅ) ಕಾನೂನು ಇಲಾಖೆಯಲ್ಲಿ ಇಂತಹ ಯಾವುದೇ ಯೋಜನೆ ಇರುವುದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಕೊಡಗು ಜಿಲ್ಲೆಯ ಐತಿಹಾಸಿಕ ಕಟ್ಟಡಗಳ ರಕ್ಷಣೆಗೆ ಪ್ರಾಧಿಕಾರ ರಚನೆ

2093(2708)

ಶ್ರೀ ಅಪ್ಪಚ್ಚು ರಂಜನ್ ಎಂ.ಪಿ.(ಸೋಮವಾರ ಪೇಟೆ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯ ಹಿಂದಿನ ರಾಜರುಗಳು ನಿರ್ಮಿಸಿದ ಹಲವಾರು ಕಟ್ಟಡಗಳು ಐತಿಹಾಸಿಕವಾಗಿದ್ದು ಇವುಗಳ ರಕ್ಷಣೆಗೆ ಪ್ರಾಧಿಕಾರವೊಂದನ್ನು ರಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೆ;

ಆ) ಹಾಗಿದ್ದಲ್ಲಿ ಎಂದಿನಿಂದ ರಚಿಸಲಾಗುವುದು?

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀಮತಿ ರಾಣಿ ಸತೀಶ್(ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ